# ಕನ್ನಡ ಸಾಹಿತ್ಯದಲ್ಲಿ ದ. ರಾ. ಬೇಂದ್ರೆಯವರ ನಾಟಕ ಸಾಹಿತ್ಯ ಮತ್ತು ರಂಗಪ್ರಯೋಗ

**ಪ್ರವೀಣ ಪೂಜಾರ***

**DOI: https://doi.org/10.5281/zenodo.22106573**

**ABSTRACT**

ಕನ್ನಡ ಸಾಹಿತ್ಯದಲ್ಲಿ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು ಮುಖ್ಯವಾಗಿ ನವೋದಯ ಯುಗದ ಶ್ರೇಷ್ಠ ಕವಿಯಾಗಿ, ವಿಮರ್ಶಕರಾಗಿ, ಅನುವಾದಕರಾಗಿ ಪ್ರಸಿದ್ಧರಾಗಿದ್ದರೂ ಸಹ ನಾಟಕ ಸಾಹಿತ್ಯದಲ್ಲಿಯೂ ತಮ್ಮದೇ ಆದಂತಹ ವಿಶಿಷ್ಟ ಕೊಡುಗೆಯನ್ನು ನೀಡಿದ್ದಾರೆ. ಅವರ ನಾಟಕಗಳಲ್ಲಿ ಕಾವ್ಯಾತ್ಮಕ ಭಾಷೆ, ತಾತ್ವಿಕಚಿಂತನೆ, ಜನಪದ ಸಂಸ್ಕೃತಿ, ಮಾನವೀಯ ಮೌಲ್ಯಗಳು ಹಾಗೂ ಸಾಮಾಜಿಕ ಪ್ರಶ್ನೆಗಳನ್ನು ಒಳಗೊಂಡಿವೆ. ಬೇಂದ್ರೆಯವರ ನಾಟಕಗಳು ಕೇವಲ ಮನರಂಜನೆಯ ಉದ್ದೇಶವನ್ನು ಹೊಂದಿಲ್ಲದೆ, ಅವು ಮಾನವನ ಅಂತರಂಗ, ಬದುಕಿನ ಅರ್ಥ, ಹಾಗೂ ಸಾಂಸ್ಕೃತಿಕ ಮೌಲ್ಯಗಳನ್ನು ರಂಗಭಾಷೆಯ ಮೂಲಕ ಅಭಿವ್ಯಕ್ತಿಸುತ್ತವೆ. ಅವರು ರಚಿಸಿದ ನಾಟಕಗಳು ವಿಶೇಷವಾಗಿ ಸಾಯೋ ಆಟ, ಗೋಲ್, ತಿರುಕರ ಪಿಡುಗು, ಜಾತ್ರೆ, ಉದ್ದಾರ, ನಗೆಯ ಹೊಗೆ ಮುಂತಾದ ಕೃತಿಗಳು ಸಂಪ್ರದಾಯಬದ್ಧವಾದ ಪೌರಾಣಿಕ – ಐತಿಹಾಸಿಕ ನಾಟಕಗಳಿಗಿಂತಲೂ ಭಿನ್ನವಾಗಿ, ಆಂತರಿಕ ಸಂವೇದನೆ, ವ್ಯಂಗ್ಯ, ಸಮಾಜದ ಸಂಕೀರ್ಣತೆ ಮತ್ತು ರಂಗಭಾಷೆಯ ಹೊಸ ಸಾಧ್ಯತೆಗಳನ್ನು ಅನ್ವೇಷಿಸುತ್ತವೆ. ರಂಗಪ್ರಯೋಗದ ದೃಷ್ಟಿಯಿಂದ ಬೇಂದ್ರೆಯವರು ಜನಪದ ಸಂಗೀತ, ಸಂಕೇತಾತ್ಮಕ ವೇದಿಕೆ, ಮನೋವೈಜ್ಞಾನಿಕ ಪಾತ್ರಚಿತ್ರಣ ಮತ್ತು ಕಾವ್ಯ – ನಾಟಕದ ಸಮನ್ವಯವನ್ನು ಯಶಸ್ವಿಯಾಗಿ ಬಳಸಿದ್ದಾರೆ. ಈ ಲೇಖನದಲ್ಲಿ ಬೇಂದ್ರೆಯವರ ನಾಟಕ ಸಾಹಿತ್ಯದ ಸ್ವರೂಪ, ಅದರ ವೈಶಿಷ್ಟ್ಯಗಳು ಹಾಗೂ ಕನ್ನಡ ರಂಗಭೂಮಿಗೆ ಅವರು ನೀಡಿದ ಕೊಡುಗೆಯನ್ನು ವಿಶ್ಲೇಷಿಸಲಾಗಿದೆ.

**KEYWORDS:** ದ.ರಾ.ಬೇಂದ್ರೆ, ನಾಟಕ ಸಾಹಿತ್ಯ, ರಂಗಪ್ರಯೋಗ, ಏಕಾಂಕ ನಾಟಕ, ಸಾಯೋ ಆಟ, ತಿರುಕರ ಪಿಡುಗು, ಗೆಳೆಯರ ಗುಂಪು.

* **ಪ್ರವೀಣ ಪೂಜಾರ,** ಸಂಶೋಧನಾ ವಿದ್ಯಾರ್ಥಿ, ಶ್ರೀನಿವಾಸ ವಿಶ್ವವಿದ್ಯಾಲಯ, ಮಂಗಳೂರು.

**ಪರಿಚಯ:**

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ದ. ರಾ. ಬೇಂದ್ರೆಯವರು "ವರಕವಿ" ಎಂಬ ಹೆಸರಿನಿಂದ ಪ್ರಸಿದ್ಧರು. ಅವರ ಕಾವ್ಯನಾಮ ಅಂಬಿಕಾತನಯದತ್ತ. ಕವಿ, ದಾರ್ಶನಿಕ ಬೇಂದ್ರೆ ಈ ಯುಗದ ಒಬ್ಬ ಮಹಾಕವಿ. ಕನ್ನಡ ನವೋದಯ ಸಾಹಿತ್ಯದ ಸ್ತಂಭಗಳಲ್ಲಿ ದ. ರಾ. ಬೇಂದ್ರೆಯವರು ಅಗ್ರಗಣ್ಯರು. ಅವರು ಕಾವ್ಯ, ಪ್ರಬಂಧ, ವಿಮರ್ಶೆ, ಅನುವಾದ ಸೇರಿದಂತೆ ಹಲವಾರು ಸಾಹಿತ್ಯ ಪ್ರಕಾರಗಳಲ್ಲಿ ತಮ್ಮ ಅತ್ಯಮೂಲ್ಯವಾದ ಪ್ರತಿಭೆಯನ್ನು ತೋರಿಸಿದ್ದಾರೆ. ಆದರೆ, ಬೇಂದ್ರೆಯವರ ಬಹುಮುಖ ಪ್ರತಿಭೆಯ ಮತ್ತೊಂದು ಪ್ರಮುಖ ಆಯಾಮವೆಂದರೆ ಅವರ ನಾಟಕ ರಚನೆ ಮತ್ತು ರಂಗಪ್ರಯೋಗದ ಆಸಕ್ತಿ. 20ನೇ ಶತಮಾನದ ಆರಂಭದಲ್ಲಿ ಕನ್ನಡ ರಂಗಭೂಮಿಯು ವೃತ್ತಿರಂಗಭೂಮಿ ಪ್ರಭಾವದಲ್ಲಿದ್ದಾಗ, ನವೋದಯದ ಹೊಸ ಅಲೆಯಾಗಿ ರಂಗಪ್ರಯೋಗಗಳನ್ನು ರೂಪಿಸಿದವರಲ್ಲಿ ಬೇಂದ್ರೆಯವರು ಮುಂಚೂಣಿಯಲ್ಲಿದ್ದಾರೆ.

ಬೇಂದ್ರೆಯವರು ಬರೆದಿದ್ದು ಮುಖ್ಯವಾಗಿ ಏಕಾಂಕ ನಾಟಕಗಳು ಮತ್ತು ಪ್ರಹಸನಗಳು. ಅವರು ರಂಗಭೂಮಿಯನ್ನು ಕೇವಲ ಮನರಂಜನೆಯ ದೃಷ್ಟಿಯಲ್ಲಿ ನೋಡದೆ, ಸಾಮಾಜಿಕ ಜಾಗೃತಿ ಹಾಗೂ ವಿಚಾರ ಮಂಥನದ ವೇದಿಕೆಯನ್ನಾಗಿ ಬಳಸಿಕೊಂಡರು. ಉತ್ತರ ಕರ್ನಾಟಕದ ಆಡುಭಾಷೆಯನ್ನು ನಾಟಕೀಯ ಸಂಭಾಷಣೆಗೆ ಬಳಸಿಕೊಂಡು ರಂಗಭೂಮಿಯ ನೈಜತೆಯನ್ನು ಹೆಚ್ಚಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ.

ಬೇಂದ್ರೆಯವರ ನಾಟಕಗಳ ವರ್ಗೀಕರಣ ಮತ್ತು ವಸ್ತು ವೈವಿಧ್ಯತೆ: ದ. ರಾ. ಬೇಂದ್ರೆಯವರು ಒಟ್ಟು 14 ನಾಟಕಗಳನ್ನು ರಚಿಸಿದ್ದಾರೆ. ಇವುಗಳನ್ನು ಕಥಾವಸ್ತು, ಶೈಲಿ ಮತ್ತು ಅಭಿವ್ಯಕ್ತಿ ಕ್ರಮದ ಆಧಾರದ ಮೇಲೆ ಪ್ರಮುಖವಾಗಿ ನಾಲ್ಕು ವರ್ಗಗಳಾಗಿ ವಿಂಗಡಿಸಬಹುದು.

| ಕ್ರ.ಸಂ | ನಾಟಕಗಳ ವರ್ಗೀಕರಣ | ಪ್ರಮುಖ ನಾಟಕಗಳು | ಮುಖ್ಯ ವಸ್ತುವಿಷಯ ಮತ್ತು ಲಕ್ಷಣಗಳು |
|---|---|---|---|
| 1 | ಸಾಮಾಜಿಕ ಹಾಸ್ಯ, ವಿಡಂಬನೆ ಮತ್ತು ವ್ಯಂಗ್ಯ ನಾಟಕಗಳು | ಸಾಯೋ ಆಟ<br>ನಗೆಯ ಹೊಗೆ<br>ತಿರುಕರ ಪಿಡುಗು<br>ಗೋಲ್ | ಸಮಾಜದ ಡಾಂಭಿಕತೆ, ಬಡತನ, ಆಡಳಿತ ವ್ಯವಸ್ಥೆಯ ಭ್ರಷ್ಟಾಚಾರ ಮತ್ತು ವರ್ಗ ಸಂಘರ್ಷದ ವಿಡಂಬನೆ. |
| 2 | ಸಾಮಾಜಿಕ ಹಾಗೂ ಕುಟುಂಬ ವ್ಯವಸ್ಥೆ | ಮಂದೀ ಮದಿವಿ<br>ಮಂದೀ ಮಕ್ಕಳು<br>ಮಂದೀ ಮನಿ | ಮನೆ – ಮನಗಳ ಬಾಂಧವ್ಯ, ಸ್ತ್ರೀ ಸಂವೇದನೆ, ಬದಲಾಗುತ್ತಿರುವ ಸಾಮಾಜಿಕ ಮೌಲ್ಯಗಳ ಮುಖಾಮುಖಿ. |
| 3 | ಸಾಂಕೇತಿಕ ಹಾಗೂ ತತ್ತ್ವ ಚಿಂತನೆಯ ನಾಟಕಗಳು | ದೆವ್ವದ ಮನೆ<br>ಆ ಥರಾ ಈ ಥರಾ<br>ಉದ್ಧಾರ | ಮಾನವೀಯ ಅಸ್ತಿತ್ವ, ಧಾರ್ಮಿಕ ಮತ್ತು ದಾರ್ಶನಿಕ ಶೋಧನೆ, ಕಾವ್ಯಮಯ ರೂಪಕಗಳು. |

| | | | |
|---|---|---|---|
| 4 | ಮಾನವೀಯ ಬಾಂಧವ್ಯ ಮತ್ತು ಮಕ್ಕಳ ನಾಟಕಗಳು | ಹಳೆಯ ಗೆಳೆಯರು ಮಕ್ಕಳು ಅಡವಿ ಮನೆ ಹೊಕ್ಕರೆ ಶೋಭನಾ ಜಾತ್ರೆ | ಉತ್ತರ ಕರ್ನಾಟಕದ ಗ್ರಾಮೀಣ ಭಾಷಾ ಸೊಗಡು, ಜಾನಪದ ಹಾಸ್ಯ ಮತ್ತು ಲಘು ವಿಡಂಬನೆ. |

ಈ ಪ್ರತಿಯೊಂದು ನಾಟಕವೂ ತನ್ನದೇ ಆದ ವಿಶಿಷ್ಟ ವಸ್ತುವನ್ನು ಹೊಂದಿದ್ದರೂ, ಅವುಗಳ ಮೂಲ ಉದ್ದೇಶ ಮಾನವ ಸ್ವಭಾವದ ಲೋಪದೋಷಗಳನ್ನು ತಿದ್ದುವದು ಮತ್ತು ಸಾಮಾಜಿಕ ಪ್ರಜ್ಞೆಯನ್ನು ಜಾಗೃತಗೊಳಿಸುವುದೇ ಆಗಿತ್ತು.

**ಬೇಂದ್ರೆಯವರ ಪ್ರಮುಖ ನಾಟಕಗಳ ವಿಶ್ಲೇಷಣೆ:**

ಸಾಯೋ ಆಟ: ಸಾವು–ಬದುಕಿನ ದಾರ್ಶನಿಕ ಹಾಸ್ಯ "ಸಾಯೋ ಆಟ" ಬೇಂದ್ರೆಯವರ ಅತ್ಯಂತ ಪ್ರಸಿದ್ಧ ಪ್ರಹಸನ ಏಕಾಂಕ ನಾಟಕವಾಗಿದೆ. ಈ ನಾಟಕವು ಮನುಷ್ಯನ ಸಾವು ಮತ್ತು ಬದುಕಿನ ನಡುವಿನ ವಿಚಿತ್ರ ಸಂಬಂಧವನ್ನು ಹಾಸ್ಯಮಯವಾಗಿ ಮತ್ತು ಚಿಂತನಾರ್ಹವಾಗಿ ಪ್ರಸ್ತುತ ಪಡಿಸುತ್ತದೆ. ಸಾವಿಗೆ ಹೆದರುವ ಮನುಷ್ಯ, ಅದೇ ಸಾವನ್ನು ಎದುರಿಸುವ ಸಂದರ್ಭದಲ್ಲಿ ತೋರುವ ವಿಚಿತ್ರ ವರ್ತನೆಗಳು ಇಲ್ಲಿ ವಿಡಂಬನೆಗೆ ಒಳಗಾಗಿವೆ. ಸಾವು ಎಂಬುದು ಭೀಕರ ಸತ್ಯವಾಗಿದ್ದರೂ, ಅದನ್ನು "ಆಟ"ದಂತೆ ನೋಡುವ ಬೇಂದ್ರೆಯವರ ದಾರ್ಶನಿಕ ದೃಷ್ಟಿ ಈ ನಾಟಕಕ್ಕೆ ವಿಶ್ವಜನೀನ ಮೌಲ್ಯವನ್ನು ತಂದುಕೊಟ್ಟಿದೆ.

ತಿರುಕರ ಪಿಡುಗು: ಸಾಮಾಜಿಕ ವಿಡಂಬನೆಯ ಶಿಖರ "ತಿರುಕರ ಪಿಡುಗು" ಬೇಂದ್ರೆಯವರ ಅತ್ಯಂತ ಪ್ರಸಿದ್ಧ ಸಾಮಾಜಿಕ ಏಕಾಂಕ ನಾಟಕವಾಗಿದೆ. ಸಮಾಜದಲ್ಲಿ ತಿರುಕರು (ಭಿಕ್ಷುಕರು) ಎದುರಿಸುವ ಶೋಷಣೆ ಮತ್ತು ಆಡಳಿತ ಯಂತ್ರವು ಅವರ ಬಗ್ಗೆ ತಳೆಯುವ ನಿರ್ದಯಿ ಧೋರಣೆಯನ್ನು ನಾಟಕವು ಅತ್ಯಂತ ಚಾಟಿ ಏಟಿನಂತೆ ಚಿತ್ರಿಸುತ್ತದೆ. ವ್ಯವಸ್ಥೆಯು ಬಡತನವನ್ನು ನಿರ್ಮೂಲನೆ ಮಾಡುವ ಬದಲು ಭಿಕ್ಷುಕರನ್ನೇ ಇಲ್ಲದಂತೆ ಮಾಡಲು ಹೊರಡುವ ಕ್ರೂರ ಹಾಸ್ಯವನ್ನು ಇಲ್ಲಿ ಕಾಣಬಹುದು. ಈ ನಾಟಕದಲ್ಲಿ ಬೇಂದ್ರೆಯವರು ಬಳಸಿದ "ತಿರುಕರ" ರೂಪಕವು ಇಡೀ ಶೋಷಿತ ವರ್ಗದ ಸಂಕೇತವಾಗಿ ನಿಲ್ಲುತ್ತದೆ.

**ಬೇಂದ್ರೆಯವರ ನಾಟಕಗಳ ಪ್ರಮುಖ ಸಾಹಿತ್ಯಿಕ ಮತ್ತು ಭಾಷಿಕ ವೈಶಿಷ್ಟ್ಯಗಳು:**

ಬೇಂದ್ರೆಯವರ ನಾಟಕಗಳು ಸಾಹಿತ್ಯಿಕವಾಗಿ ಅತ್ಯುನ್ನತ ಸ್ಥಾನದಲ್ಲಿರಲು ಅವರ ವಿಶಿಷ್ಟ ಶೈಲಿ ಮತ್ತು ಭಾಷಾ ಪ್ರಯೋಗವೇ ಕಾರಣ. ಅವರ ನಾಟಕ ಸಾಹಿತ್ಯಿಕ ಪ್ರಮುಖ ವೈಶಿಷ್ಟ್ಯತೆಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

- **ಭಾಷಾ ಶೈಲಿ:** ಉತ್ತರ ಕರ್ನಾಟಕದ (ಧಾರವಾಡ) ಶುದ್ಧ ಆಡುಭಾಷೆ, ನುಡಿಗಟ್ಟುಗಳು, ಗಾದೆ ಮಾತುಗಳು ಮತ್ತು ಲಯ ಬದ್ಧ ಭಾಷೆಯನ್ನು ಬೇಂದ್ರೆಯವರು ರಂಗಸ್ಥಳಕ್ಕೆ ತಂದರು.
- **ಕಾವ್ಯಾತ್ಮಕ ಪ್ರಾಸ ಮತ್ತು ಲಯ:** ನಾಟಕ ಸಂಭಾಷಣೆಗಳು ಗದ್ಯರೂಪದಲ್ಲಿದ್ದರೂ, ಅವುಗಳಲ್ಲಿ ಅಂತರ್ಗತವಾಗಿ ಕಾವ್ಯದ ಲಯ ಮತ್ತು ಪ್ರಾಸದ ಚಮತ್ಕಾರವಿರುತ್ತದೆ. ಉದಾಹರಣೆಗೆ, ವಿಡಂಬನಾತ್ಮಕ ಸಂಭಾಷಣೆಗಳು ನಗೆಯನ್ನು ತರಿಸುತ್ತಲೇ ಆಳವಾದ

ಚಿಂತನೆಗೆ ಹಚ್ಚುತ್ತವೆ.

- **ನಾಟಕೀಯರೂಪ:** ಬಹುತೇಕ ನಾಟಕಗಳು ಏಕಾಂಕ ನಾಟಕಗಳು. ಕಡಿಮೆ ಪಾತ್ರಗಳು ಹಾಗೂ ಸಣ್ಣ ರಂಗಸ್ಥಳದಲ್ಲೂ ಪ್ರದರ್ಶಿಸಬಹುದಾದ ಸರಳತೆ.
- **ಹಾಸ್ಯ ಹಾಗೂ ತೀಕ್ಷ್ಣ ಸಾಮಾಜಿಕ ವಿಡಂಬನೆ:** ಕೇವಲ ನಗಿಸುವುದಕ್ಕಾಗಿ ಹಾಸ್ಯವಲ್ಲ; ನಗೆಯ ಹಿಂದಿರುವ ಕಹಿ ಸತ್ಯವನ್ನು ಪ್ರೇಕ್ಷಕರಿಗೆ ತಲುಪಿಸುವ "ನಗೆಯ ಹೊಗೆ" ಶೈಲಿ. ಸಮಾಜದ ಜಾತಿ ಪದ್ಧತಿ, ಲಿಂಗ ತಾರತಮ್ಯ, ರಾಜಕೀಯ ಡಾಂಭಿಕತೆ ಹಾಗೂ ಶಿಕ್ಷಣ ವ್ಯವಸ್ಥೆಯ ಕೊರತೆಗಳನ್ನು ಅತ್ಯಂತ ನಿರ್ದಾಕ್ಷಿಣ್ಯವಾಗಿ ವಿಮರ್ಶಿಸುವ ಶಕ್ತಿ ಅವರ ನಾಟಕಗಳಿಗಿದೆ.
- **ಸಾಂಕೇತಿಕತೆ:** ಬೇಂದ್ರೆಯವರ ನಾಟಕಗಳು ಕೇವಲ ಮೇಲ್ಮೈಕಥೆಯನ್ನು ಹೇಳುವುದಿಲ್ಲ. ಪ್ರತಿಯೊಂದು ಪಾತ್ರ ಮತ್ತು ಸನ್ನಿವೇಶವೂ ಆಳವಾದ ಸಾಂಸ್ಕೃತಿಕ ಅಥವಾ ತತ್ವಶಾಸ್ತ್ರೀಯ ಅರ್ಥವನ್ನು ಧ್ವನಿಸುತ್ತದೆ.

**ರಂಗಪ್ರಯೋಗ ಮತ್ತು ಗೆಳೆಯರ ಗುಂಪು:**

ಬೇಂದ್ರೆಯವರ ನಾಟಕ ಕೊಡುಗೆಯು ಕೇವಲ ಬರವಣಿಗೆಗೆ ಸೀಮಿತವಾಗದೆ, ಸಕ್ರಿಯ ರಂಗಪ್ರಯೋಗಗಳ ಮೂಲಕ ಸಾಕಾರಗೊಂಡಿತು. 1920 ಮತ್ತು 1930 ರ ದಶಕಗಳಲ್ಲಿ ಧಾರವಾಡದಲ್ಲಿ ಸ್ಥಾಪನೆಗೊಂಡ 'ಗೆಳೆಯರ ಗುಂಪು' ಕನ್ನಡ ಸಾಹಿತ್ಯ ಮತ್ತು ರಂಗಭೂಮಿಯ ಇತಿಹಾಸದಲ್ಲಿ ಸುವರ್ಣ ಅಧ್ಯಾಯವಾಗಿದೆ.

ಬೇಂದ್ರೆಯವರ ನೇತೃತ್ವದಲ್ಲಿ ಬೆಳೆದ ಈ ಸಾಹಿತ್ಯಕ ಕೂಟವು ಹೊಸ ನಾಟಕಗಳ ಓದು, ಚರ್ಚೆ ಮತ್ತು ರಂಗ ಪ್ರದರ್ಶನಗಳನ್ನು ನಿರಂತರವಾಗಿ ಹಮ್ಮಿಕೊಳ್ಳುತ್ತಿತ್ತು. ಬೇಂದ್ರೆಯವರು ಸ್ವತಃ ನಟರಾಗಿ, ನಿರ್ದೇಶಕರಾಗಿ ಹಾಗೂ ರಂಗ ಸಂಘಟಕರಾಗಿ ಕಾರ್ಯನಿರ್ವಹಿಸಿದರು. ಅಂದಿನ ಕಾಲದಲ್ಲಿ ರಂಗಭೂಮಿಯು ಕೇವಲ ವೃತ್ತಿಪರ ಕಂಪನಿಗಳ ಸ್ವತ್ತಾಗಿದ್ದಾಗ, ಹವ್ಯಾಸಿ ರಂಗಭೂಮಿಯ ಬೀಜಗಳನ್ನು ಬಿತ್ತಿದ ಕೀರ್ತಿ ಬೇಂದ್ರೆ ಮತ್ತು ಅವರ ಗೆಳೆಯರ ಬಳಗಕ್ಕೆ ಸಲ್ಲುತ್ತದೆ.

ಬೇಂದ್ರೆಯವರು ರಂಗಭೂಮಿಯನ್ನು ಕೇವಲ ಮನರಂಜನೆಯ ಮಾಧ್ಯಮವನ್ನಾಗಿ ನೋಡದೆ, ಸಮಾಜಮುಖಿ ಚಿಂತನೆಯ ವೇದಿಕೆಯಾಗಿ ಬಳಸಿಕೊಂಡರು. ಅವರ ಏಕಾಂಕ ನಾಟಕಗಳು ಶಾಲಾ-ಕಾಲೇಜುಗಳ ವಾರ್ಷಿಕೋತ್ಸವಗಳಲ್ಲಿ, ಗಣೇಶೋತ್ಸವದ ವೇದಿಕೆಗಳಲ್ಲಿ ಮತ್ತು ಗ್ರಾಮೀಣ ಜಾತ್ರೆಗಳಲ್ಲಿ ವ್ಯಾಪಕವಾಗಿ ಅಭಿನಯಿಸಲ್ಪಟ್ಟು, ರಂಗಭೂಮಿಯನ್ನು ಜನಸಾಮಾನ್ಯರ ಹತ್ತಿರಕ್ಕೆ ಕೊಂಡೊಯ್ದವು.

**ಕನ್ನಡ ರಂಗಭೂಮಿಯ ಮೇಲೆ ಬೇಂದ್ರೆಯವರ ಪ್ರಭಾವ:**

ಕನ್ನಡ ನಾಟಕ ಸಾಹಿತ್ಯದ ವಿಕಾಸದಲ್ಲಿ ಬೇಂದ್ರೆಯವರ ಕೊಡುಗೆ ಅತ್ಯಂತ ನಿರ್ಣಾಯಕವಾದದ್ದು. ಶ್ರೀರಂಗ, ಶಿವರಾಮ ಕಾರಂತ, ಕುವೆಂಪು ಮುಂತಾದ ನವೋದಯದ ಪ್ರಮುಖ ನಾಟಕಕಾರರ ಸಾಲಿನಲ್ಲಿ ಬೇಂದ್ರೆಯವರು ತಮ್ಮ ವಿಶಿಷ್ಟ "ಏಕಾಂಕ ನಾಟಕ" ಮಾದರಿಯಿಂದ ಎದ್ದು ಕಾಣುತ್ತಾರೆ. ಅವರು ಕನ್ನಡದಲ್ಲಿ ಏಕಾಂಕ ನಾಟಕ ಪ್ರಕಾರಕ್ಕೆ ಸ್ಪಷ್ಟ ಸ್ವರೂಪ ಮತ್ತು ಘನತೆಯನ್ನು ತಂದುಕೊಟ್ಟರು.

ತರುವಾಯ ಬಂದ ನವ್ಯ ಸಾಹಿತ್ಯದ ಸಮಕಾಲೀನ ರಂಗಭೂಮಿಯ ನಾಟಕಕಾರರಾದ ಗಿರೀಶ ಕಾರ್ನಾಡ್, ಚಂದ್ರಶೇಖರ ಕಂಬಾರ, ಪಿ.ಲಂಕೇಶ ಮುಂತಾದವರ ಮೇಲೆಯೂ ಬೇಂದ್ರೆಯವರ ಸಾಂಕೇತಿಕತೆ ಹಾಗೂ ಜಾನಪದೀಯ ರಂಗಭಾಷೆಯ ಪ್ರಭಾವವನ್ನು ಸ್ಪಷ್ಟವಾಗಿ ಗುರುತಿಸಬಹುದು. ಜಾನಪದ ಧಾಟಿ ಮತ್ತು ಆಧುನಿಕ ವೈಚಾರಿಕತೆಯನ್ನು ಬೆಸೆಯುವ ರಂಗತಂತ್ರಕ್ಕೆ ಬೇಂದ್ರೆಯವರೇ ಮೊದಲ ಮಾರ್ಗದರ್ಶಕರಾಗಿದ್ದರು.

**ಉಪಸಂಹಾರ:**

ದ. ರಾ. ಬೇಂದ್ರೆಯವರು ಕನ್ನಡ ಸಾಹಿತ್ಯ ಲೋಕದ "ಕಾವ್ಯಚಿಂತಕ" ಮಾತ್ರವಲ್ಲ, ರಂಗಭೂಮಿಯ ಪ್ರಭಾವಿ ಚಿಂತಕರೂ ಹೌದು. ಅವರ ನಾಟಕಗಳು ಸಣ್ಣ ಪ್ರಮಾಣದವುಗಳಾಗಿದ್ದರೂ, ಅವುಗಳು ತಲುಪುವ ವೈಚಾರಿಕ ಎತ್ತರ ಮತ್ತು ದಾರ್ಶನಿಕ ಆಳ ಅಪಾರವಾದದ್ದು. ಸಾಮಾಜಿಕ ಕಳಕಳಿ, ವಿಡಂಬನಾತ್ಮಕ ಹಾಸ್ಯ, ರಂಗ ಸಾಧ್ಯತೆಯ ಅರಿವು ಮತ್ತು ನಾದಮಯ ಭಾಷೆಗಳ ಸಮ್ಮಿಲನವೇ ಬೇಂದ್ರೆಯವರ ನಾಟಕ ಸಾಹಿತ್ಯ. ಅವರ ರಂಗಪ್ರಯೋಗಗಳು ಕನ್ನಡ ಹವ್ಯಾಸಿ ರಂಗಭೂಮಿಗೆ ಹೊಸ ರಕ್ತವನ್ನು ಹರಿಸಿದವು. ಆ ಮೂಲಕ, ಕನ್ನಡ ಸಾಹಿತ್ಯ ಮತ್ತು ರಂಗಭೂಮಿಯ ಚರಿತ್ರೆಯಲ್ಲಿ ದ. ರಾ. ಬೇಂದ್ರೆಯವರ ನಾಟಕ ಸಾಹಿತ್ಯವೂ ಎಂದೆಂದಿಗೂ ಮೌಲ್ಯಯುತ ಹಾಗೂ ಪ್ರಸಕ್ತವಾದ ಕೊಡುಗೆಯಾಗಿ ಉಳಿಯುತ್ತದೆ.

**ಪರಾಮರ್ಶನ ಗ್ರಂಥಗಳು:**

1. ಬೇಂದ್ರೆ ದ. ರಾ., (1955), ಬೇಂದ್ರೆ ನಾಟಕಗಳು, ಧಾರವಾಡ: ಮನೋಹರ ಗ್ರಂಥಮಾಲಾ.
2. ಆಮೂರ ಜಿ. ಎಸ್., (1996), ಭುವನದ ಭಾಗ್ಯ, ಬೆಂಗಳೂರು: ಪ್ರಿಯದರ್ಶಿನಿ ಪ್ರಕಾಶನ.
3. ಕೀರ್ತಿನಾಥ ಕುರ್ತಕೋಟಿ, (1962), ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ಧಾರವಾಡ: ಮನೋಹರ ಗ್ರಂಥಮಾಲಾ.
4. ವಾಮನ ಬೇಂದ್ರೆ, (2010), ಸಂವಾದ ಕಂಡ ಅಂದತ್ತ, ಹುಬ್ಬಳ್ಳಿ: ಡಾ. ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆ, ಶ್ರೀಮಾತಾ ಪ್ರಕಾಶನ.
5. ಶೇಷಗಿರಿರಾವ್ ಎಲ್. ಎಸ್., (2002), ಹೊಸಗನ್ನಡ ಸಾಹಿತ್ಯ ಚರಿತ್ರೆ, ಬೆಂಗಳೂರು: ಅಂಕಿತ ಪುಸ್ತಕ.
6. ವಾಮನ ಬೇಂದ್ರೆ, (2008), ಅಂಬಿಕಾತನಯದತ್ತರ ಸಾಯೋ ಆಟ, ಹುಬ್ಬಳ್ಳಿ: ಡಾ. ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆ, ಶ್ರೀಮಾತಾ ಪ್ರಕಾಶನ.
7. ವಾಮನ ಬೇಂದ್ರೆ, (2008), ಅಂಬಿಕಾತನಯದತ್ತರ ತಿರುಕರ ಪಿಡುಗು, ಹುಬ್ಬಳ್ಳಿ: ಡಾ. ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆ, ಶ್ರೀಮಾತಾ ಪ್ರಕಾಶನ.
8. ತಿರುಮಲೇಶ್ ಕೆ. ವಿ., (2013), ಬೇಂದ್ರೆಯವರ ಕಾವ್ಯ ಶೈಲಿ, ಬೆಂಗಳೂರು: ಅಭಿನವ.